RNU AIR DHARWAD

**MAY 18, 2025**
**AKASHAVANI - DHARWAD**
**REGIONAL NEWS BULLETIN (KANNADA) 12 P.M.**

**ಸಣ್ಣ ಮತ್ತು ಮಧ್ಯಮ ಕೈಗಾರಿಕೆಗ**ಳು ಹತ್ತಾರು ಜನರಿಗೆ ಉದ್ಯೋಗ ನೀಡುವ ಮೂಲಕ ಅವರ ಬದುಕಿಗೆ ಆಸರೆಯಾಗಿವೆ. ಜತೆಗೆ ಸರ್ಕಾರಗಳಿಗೂ ಶಕ್ತಿ ತುಂಬುತ್ತಿವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸಣ್ಣ ಕೈಗಾರಿಕೆಗಳ ಸಂಘಗಳ ಒಕ್ಕೂಟದ 'ವಜ್ರ ಮಹೋತ್ಸವ'ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಕರ್ನಾಟಕದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಅತಿ ಹೆಚ್ಚು ಸಣ್ಣ ಕೈಗಾರಿಕೆಗಳು ಇವೆ. ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಎರಡು ಹಾಗೂ ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ಆದ್ಯತೆ ನೀಡಲು ಭರವಸೆ ನೀಡಿದ್ದೆವು. ಅದರಂತೆ ಕ್ರಮ ಕೈಗೊಂಡಿದ್ದೇವೆ' ಎಂದರು.

<><><>

**ಸಾಮಾಜಿಕ ಮಾಧ್ಯಮಗಳ** ಮೂಲಕ ಅಪಪ್ರಚಾರ ಮಾಡುವವರ ವಿರುದ್ಧ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ರಾಮನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ತ್ರೈಮಾಸಿಕ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುವವರಿಗೆ ಶಿಕ್ಷೆ ಆಗುತ್ತದೆ ಎನ್ನುವುದನ್ನು ಪೊಲೀಸರು ಕಾನೂನು ಕ್ರಮಗಳ ಮೂಲಕ ತೋರಿಸಿ ಕೊಡಬೇಕು. ಅದಕ್ಕಾಗಿ ಸ್ವಯಂ ಪ್ರೇರಿತರಾಗಿ ಪ್ರಕರಣಗಳನ್ನು ದಾಖಲಿಸಬೇಕು ಎಂದರು. ಗಾಳಿ ಮಳೆಗೆ ವಿದ್ಯುತ್ ತಂತಿಗಳು ಕುಸಿಯುವುದು, ಶಾರ್ಟ್ ಸರ್ಕ್ಯೂಟ್ ಸೇರಿದಂತೆ ಯಾವುದೇ ರೀತಿ ಅವಘಡಗಳು ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಗಂಗಾ ಕಲ್ಯಾಣ ಯೋಜನೆಯಡಿ ನೀಡಲಾಗುವ ಬೋರ್‌ವೆಲ್‌ಗಳಿಗೆ ಕೂಡಲೇ ವಿದ್ಯುತ್ ಸಂಪರ್ಕ ಒದಗಿಸಬೇಕು ಎಂದು ಸೂಚಿಸಿದರು.

<><><>

**ಪೆಹಲ್ಗಾಮ್‌ನ ಭಯೋತ್ಪಾದಕ ದಾಳಿಯಲ್ಲಿ**ಪಾಕಿಸ್ಥಾನದ ಕೈವಾಡ ಬಹಿರಂಗಪಡಿಸಿ ಗಡಿ ಆಚೆಗಿನ ಭಯೋತ್ಪಾದನೆಯ ವಿರುದ್ಧ ಜಾಗತಿಕ ಬೆಂಬಲವನ್ನು ರೂಪಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಬಹುಪಕ್ಷೀಯ ಸಂಸದರ ನಿಯೋಗಗಳನ್ನು ಆಯ್ದ ರಾಷ್ಟ್ರಗಳಿಗೆ ಕಳುಹಿಸುವ ದಿಟ್ಟ ರಾಜತಾಂತ್ರಿಕ ನಿರ್ಣಯ ಕೈಗೊಂಡಿದೆ. ಪಾಕಿಸ್ಥಾನ ಮತ್ತು ಅದರ ಸಹಾನುಭೂತಿದಾರರು ಹೆಣೆಯುತ್ತಿರುವ ನಿರೂಪಣೆಯನ್ನು ಮುರಿಯುವ ರಾಜತಾಂತ್ರಿಕ ದಿಟ್ಟ ಕ್ರಮದ ಹೆಜ್ಜೆ ಇದಾಗಿದೆ ಎಂದು ಯೋಜನೆಯ ಹಿರಿಯ ಅಧಿಕಾರಿ ತಿಳಿಸಿದ್ದಾರೆ. ಬಹುಪಕ್ಷೀಯ ಸಂಸದರ ನಿಯೋಗಗಳು ಭಾರತದ ಪುರಾವೆಗಳು ಮತ್ತು ನಿಲುವನ್ನು ವಿದೇಶಿ ಸರ್ಕಾರಗಳು ಮತ್ತು ಸಂಸ್ಥೆಗಳಿಗೆ ನೇರವಾಗಿ ಪ್ರಸ್ತುತಪಡಿಸಿ ಜಾಗತಿಕ ನಿರೂಪಣೆಯನ್ನು ಬದಲಾಯಿಸುವ ಗುರಿ ಹೊಂದಿವೆ.

<><><>

**ಅರಣ್ಯ ಸಂರಕ್ಷಣೆಯಲ್ಲಿ,**ವನವಾಸಿಗರ ಪಾತ್ರ ಹಿರಿದಾಗಿದೆ ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕು ಹೆಮ್ಮಡಗಾದಲ್ಲಿ ಭೀಮಘಡ ಅರಣ್ಯ ವಲಯದ ತಳವಾಡೆ ಗೌಳಿ ಗ್ರಾಮದಿಂದ, ಪುನರ್ವಸತಿಗೊಳ್ಳಲು ಬಯಸಿದ 27 ಕುಟುಂಬಗಳಿಗೆ ಪ್ರಥಮ ಕಂತು 10 ಲಕ್ಷ ರೂಪಾಯಿ ಚೆಕ್ ವಿತರಿಸಿ ಮಾತನಾಡಿದರು. ಅರಣ್ಯ ವಾಸ ಕ ್ಟ ಸಾಧ್ಯ. ಭೀಮಘಡ ಅಭಯಾರಣ್ಯ ವ್ಯಾಪ್ತಿಯಲ್ಲಿ 13 ಗ್ರಾಮಗಳಿದ್ದು 754 ಕುಟುಂಬಗಳು ವಾಸಿಸುತ್ತಿವೆ. ಆ ಪೈಕಿ ತಳವಾಡೆ ಗೌಳಿ ಗ್ರಾಮದ 27 ಕುಟುಂಬಗಳು, ಸ್ವಯಂ ಪ್ರೇರಿತವಾಗಿ ಕಾಡಿನಿಂದ ಹೊರಬಂದು ಪುನರ್ವಸತಿಗೊಳ್ಳಲು ಬಯಸಿವೆ ಎಂದರು.

<><><>

**ಚಿಕ್ಕಮಗಳೂರು ಜಿಲ್ಲೆಯಲ್ಲಿ,**ಪ್ರವಾಸೋದ್ಯಮಕ್ಕೆ ವಿಫುಲ ಅವಕಾಶಗಳಿವೆ. ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಪ್ರಸ್ತಾವ ಸಲ್ಲಿಸುವಂತೆ ವಿಧಾನ ಪರಿಷತ್ತಿನ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. ಪ್ರವಾಸಿಗರನ್ನು ಆಕರ್ಷಿಸಲು ಅಗತ್ಯ ಕ್ರಿಯಾಯೋಜನೆ ಸಿದ್ಧಪಡಿಸುವಂತೆ ಅವರು ಸಂಬಂಧಿತ ಇಲಾಖೆಗಳಿಗೆ ತಿಳಿಸಿದರು.

<><><>

**ಧಾರವಾಡದ, ಮನೋಹರ ಗ್ರಂಥಮಾಲೆಯ**ಸಂಪಾದಕ ಡಾಕ್ಟರ್ ರಮಾಕಾಂತ ಜೋಶಿ ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ವಯೋಸಹಜ ಕಾಯಿಲೆಯಿಂದ ನಿನ್ನೆ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಮನೋಹರ ಗ್ರಂಥ ಮಾಲೆಯ ವ್ಯವಸ್ಥಾಪಕರಾಗಿ ಆಂಗ್ಲ ಭಾಷಾ ಪ್ರಾಧ್ಯಾಪಕರಾಗಿ ಲೇಖಕರಾಗಿ ರಮಾಕಾಂತ ಜೋಶಿ ಖ್ಯಾತಿವೆತ್ತಿದ್ದರು. ಇಂದು ಬೆಳಗ್ಗೆ ಧಾರವಾಡದ ಮಂಗಳವಾರ ಪೇಟೆಯ ಮೆಣಸಿನಕಾಯಿ ಓಣಿಯ ಅವರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಪಾರ್ಥಿವ ಶರೀರದ ಅಂತ್ಯಕ್ರಿಯೆಇಂದು ಧಾರವಾಡದ ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ನೆರವೇರಿತು.

<><><>

**ಧಾರವಾಡ ಘರಾಣೆಯ,**ಸಿತಾರ ರತ್ನ ರಹಿಮತ್ ಖಾನ ಅವರ ಸುಪುತ್ರ ಸಿತಾರ ನವಾಜ್ ಪ್ರೊಫೆಸರ್ ಅಬ್ದುಲ್ ಕರೀಮ್ ಖಾನ್ ಅವರ ಸಂಸ್ಮರಣೆಯಲ್ಲಿ ಸಿತಾರರತ್ನ ಸಮಿತಿ ಆಯೋಜಿಸಿದ ಮೂರು ದಿನಗಳ 'ಪರಂಪರಾ ಸಂಗೀತೋತ್ಸವ' ಇಂದು ಸಮಾರೋಪಗೊಳ್ಳಲಿದೆ. ಆಲೂರು ವೆಂಕಟರಾವ ಸಭಾಭವನದಲ್ಲಿಇಂದು ಸಂಜೆ 5.30ಕ್ಕೆ ಗೋವಾದ ಸುಭಾಷ್‌ಪವಾರ್ ಹಾಗೂ ಪುಣೆಯ ರಾಧಿಕಾ ಜೋಶಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿ ಕೊಡಲಿದ್ದಾರೆ. ಬಳಿಕಪಂಡಿತ್ ರಘುನಾಥ ನಾಕೋಡ ಹಾಗೂ ರವಿಕಿರಣ ನಾಕೋಡ ಅವರ ತಬಲಾ ಜುಗಲ್‌ಬಂದಿ ಆಯೋಜಿತವಾಗಿದೆ.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ** ಅವರು ವಿವಿಧ ಕಾರ್ಯಕ್ರಮಗಳ ಅಂಗವಾಗಿ ಇಂದು ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಪ್ರವಾಸ ಕೈಗೊಂಡಿದ್ದರು. ಆದರೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಪ್ರವಾಸ ರದ್ದುಗೊಳಿಸಲಾಗಿದೆ.

<><><>

**ವಿಜಯಪುರ ಜಿಲ್ಲೆಯ** ಆಲಮಟ್ಟಿ ಜಲಾಶಯ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಭಯೋತ್ಪಾದಕರು ದಾಳಿ ನಡೆಸಿದರೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು, ವಿಜಯಪುರ, ಬಾಗಲಕೋಟೆ ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ಅಣಕು ಪ್ರದರ್ಶನ ನಿನ್ನೆ ಸಂಜೆ ಜರುಗಿತು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>